ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಮಾರಾಟ ಮಳಿಗೆಗಳ ಬಗ್ಗೆ

೧೩೫೦. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಕೈಗಾರಿಕಾ ಇಂಧನ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಮಾರಾಟ ಮಳಿಗೆಗಳನ್ನು ನಿರ್ವಹಿಸುತ್ತಿದೆ ?

ಆ) ೧೯೮೯–೯೦ನೇ ಸಾಲಿನಲ್ಲಿ ಈ ಮಳಿಗೆಗಳಲ್ಲಿ ಆದ ಒಟ್ಟು ವ್ಯಾಪಾರದ ವೊತ್ತ ಎಷ್ಟು ? ಮತ್ತು ನೌಕರ ವರ್ಗಕ್ಕೆ ಸಂಬಳ ಸಾರಿಗೆ ಸೇರಿದಂತೆ ಆದ ಒಟ್ಟು ವೆಚ್ಚ ಎಷ್ಟು ?

ಇ) ಬೆಂಗಳೂರು ನಗರದ ರೈಲು ನಿಲ್ದಾಣ ಮತ್ತು ಬಸ್ ನಿಲ್ದಾಣಗಳಲ್ಲಿ ಮಾರಾಟ ಮಳಿಗೆಗಳು ಇವೆಯೇ ?

ಈ) ಇಲ್ಲದೇ ಹೋದಲ್ಲಿ ಅಂತಹ ಮಾರಾಟ ಮಳಿಗೆಗಳನ್ನು ಈ ಸ್ಥಳಗಳಲ್ಲಿ ಪ್ರಾರಂಭಿಸುವ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೇ ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ, ಇಂಧನ ಹಾಗೂ ವಕ್ಫ್ ಸಚಿವರು).—

ಅ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಬೆಂಗಳೂರು ನಗರದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಮಾರಾಟ ಮಳಿಗೆಗಳನ್ನು ನಿರ್ವಹಿಸುತ್ತಿದೆ.

೧. ಕಾವೇರಿ, ಎಂ.ಜಿ. ರಸ್ತೆ, ಬೆಂಗಳೂರು–೧
೨. ಕಾವೇರಿ ಭವನ, ಬೆಂಗಳೂರು–೯
೩. ಬೆಂಗಳೂರು ವಿಮಾನ ನಿಲ್ದಾಣ
೪. ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, ಬೆಂಗಳೂರು–೧೧.

ಆ)

ಬೆಂಗಳೂರು ನಗರದಲ್ಲಿನ ಮಾರಾಟ ಮಳಿಗೆಯ ಹೆಸರು	ಮಾರಾಟ	ಸಂಬಳ ಮತ್ತು ಇತರೆ ವೆಚ್ಚಗಳು (ರೂ. ಲಕ್ಷಗಳಲ್ಲಿ)
೧. ಕಾವೇರಿ, ಎಂ.ಜಿ. ರಸ್ತೆ	೨೫೫.೯೩	೩೨.೫೦
೨. ಕಾವೇರಿ ಭವನ, ಬೆಂಗಳೂರು	೧೮.೫೩	೪.೯೦
೩. ಬೆಂಗಳೂರು ವಿಮಾನ ನಿಲ್ದಾಣ	೨೧.೦೮	೨.೩೫
೪. ಜಯನಗರ ಶಾಪಿಂಗ್ ಕಾಂಪ್ಲೆಕ್ಸ್	೧೦.೬೧	೨.೧೦

ಇ) ಇಲ್ಲ.

ಈ) ಬೆಂಗಳೂರು ಬಸ್ ನಿಲ್ದಾಣದ ಹತ್ತಿರ ಒಂದು ಮಾರಾಟ ಮಳಿಗೆಯನ್ನು ತೆರೆಯಲು ಪ್ರಯತ್ನ ಗಳನ್ನು ಮಾಡಲಾಗುತ್ತಿದೆ.

ರೇಷ್ಮೆ ಬೆಳೆಗಾರರಿಗೆ ಬೋನಸ್ ಹಣ

೯೬೭. ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ರೇಷ್ಮೆ ಬೆಳೆಗಾರರಿಗೆ ಕೊಡುತ್ತಿರುವ ಬೋನಸ್ ದರ,

ಆ) ಬೋನಸ್ ಪಾವತಿ ಮಾಡುವಲ್ಲಿ ಆರು ತಿಂಗಳ ಕಾಲ ವಿಳಂಬವಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೆ ?

ಇ) ಹಾಗಿದ ಲ್ಲಿ ಇದಕ್ಕೆ ಕಾರಣಗಳು ?